ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಸಂಖ್ಯೆ : 642

ಸದಸ್ಯರ ಹೆಸರು : ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 24.09.2020

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಸಚಿವಾಲಯವು ರಾಜ್ಯದ ರಾಜಧಾನಿಯಲ್ಲಿದ್ದು, ಸರ್ಕಾರದ ಮೂಲ ಆದೇಶ ಮತ್ತು ನಿಯಮಗಳನ್ನು ಮಾಡುವ ಮೂಲ ಕೇಂದ್ರವಾಗಿದ್ದು, ಇಲ್ಲಿನ ಅಧಿಕಾರಿ/ ಸಿಬ್ಬಂದಿಗಳನ್ನು ಬೇರೆ ನಿಗಮ/ ಇಲಾಖೆಗಳಿಗೆ ನಿಯೋಜನೆ ಮೇರೆಗೆ ಕಳುಹಿಸಿದ್ದಲ್ಲಿ ಸಚಿವಾಲಯದ ಕೆಲಸ ಕಾರ್ಯಗಳಿಗೆ ತೊಂದರೆಯಾಗುವುದಿಲ್ಲವೆ; (ವಿವರ ನೀಡುವುದು)	ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 16(a) (ii) ರನ್ವಯ ಯಾವುದೇ ಸರ್ಕಾರಿ ನೌಕರರು ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಯ ಸಮಾನಾಂತರ ಹುದ್ದೆಗೆ ನಿಯೋಜನೆ ಮೇಲೆ ತೆರಳಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಮುಂದುವರೆದು, ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು, 2019ರಲ್ಲಿ ಕಲ್ಪಿಸಲಾಗಿರುವ ಅವಕಾಶಗಳನ್ವಯ ನಿಗದಿತ ಸಂಖ್ಯೆಯ ಅಧಿಕಾರಿಗಳನ್ನು ಮಾತ್ರ ಇತರೆ ಇಲಾಖೆ/ ನಿಗಮಗಳಿಗೆ ನಿಯೋಜನೆ ಮೇರೆಗೆ ನಿಯುಕ್ತಿಗೊಳಿಸಲಾಗುತ್ತದೆ. ಸಚಿವಾಲಯದಿಂದ ನಿಯೋಜನೆ ಮೇರೆಗೆ ನೇಮಿಸುವಷ್ಟೇ ಸಂಖ್ಯೆಯ ಅಧಿಕಾರಿ/ನೌಕರರುಗಳನ್ನು ನಿಯೋಜನೆ ಮೇರೆಗೆ ಸಚಿವಾಲಯಕ್ಕೆ ಪಡೆಯಲು ಅವಕಾಶ ಕಲ್ಪಿಸಿರುವುದರಿಂದ ಸಚಿವಾಲಯದ ಕೆಲಸ ಕಾರ್ಯಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ.
ಆ	ಸಚಿವಾಲಯದ ಅಧಿಕಾರಿಗಳನ್ನು ಬೇರೆ ಬೇರೆ ಇಲಾಖೆಯ ಮುಖ್ಯಸ್ಥರುಗಳನ್ನಾಗಿ ನೇಮಕ ಮಾಡುತ್ತಿದ್ದು, ಇದರಿಂದಾಗಿ ಆಯಾ ಮಾತೃ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳು ಬಡ್ತಿಯಿಂದ ವಂಚಿತರಾಗುವುದಿಲ್ಲವೆ;	ಯಾವುದೇ ಇಲಾಖೆಗಳಲ್ಲಿ ನಿಯೋಜನೆ ಹುದ್ದೆಗಳೆಂದು ಗುರುತಿಸಲ್ಪಡುವ ಖಾಲಿ ಹುದ್ದೆಗಳಿಗೆ ಮಾತ್ರ ಸ್ಥಳನಿಯುಕ್ತಿಗೊಳಿಸಲಾಗುವುದರಿಂದ ಬಡ್ತಿಯಿಂದ ವಂಚಿತರಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ	ಸಚಿವಾಲಯದ ಸಿಬ್ಬಂದಿ/ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ಬೇರೆ ಬೇರೆ ಇಲಾಖೆಗಳಿಗೆ ಕಳುಹಿಸದಿರಲು ಸರ್ಕಾರದ ಕಠಿಣ ಕ್ರಮಗಳೇನು; (ಮಾಹಿತಿ ನೀಡುವುದು)	ನಿಯೋಜನೆ ಮಾಡಲಾಗುವ ಇಲಾಖೆಗಳಲ್ಲಿ ಅನಿವಾರ್ಯವಾಗಿ ಭರ್ತಿ ಮಾಡಲೇಬೇಕಾದ ಖಾಲಿ ಹುದ್ದೆಗಳಿಗೆ ನಿಯೋಜನೆ ಮೇಲೆ ತೆರಳಲು ಇಚ್ಛೆ ವ್ಯಕ್ತಪಡಿಸುವ ಅಧಿಕಾರಿ/ ಸಿಬ್ಬಂದಿಗಳನ್ನು ಮಾತ್ರ ನಿಯೋಜಿಸಲಾಗುತ್ತದೆ. ಉಳಿದಂತೆ ಸಾಮಾನ್ಯ ವರ್ಗಾವಣೆ ಪ್ರಕರಣಗಳಂತೆ ನಿಯೋಜನೆಯನ್ನು ಪರಿಗಣಿಸುವುದಿಲ್ಲ.
ಈ	ಈ ಹಿಂದೆ ಬೇರೆ ಇಲಾಖೆಗಳಿಗೆ ನಿಯೋಜನೆ ಮೇಲೆ ತೆರಳಿದ ಅಧಿಕಾರಿಗಳು ಮತ್ತು ಸಚಿವಾಲಯದ ಸೇವೆಗೆ ಹಿಂದಿರುಗಿದಾಗ ಇಲ್ಲಿನ ಜೇಷ್ಠತೆಯಲ್ಲಿ ಕನಿಷ್ಟ ಸ್ಥಾನಕ್ಕೆ ನೀಡಲು ನಿಯಮಗಳನ್ನು ಮಾಡಲು ಸರ್ಕಾರದ ನಿಲುವೇನು? (ವಿವರ ನೀಡುವುದು)	ನಿಯೋಜನೆ ಮೇಲೆ ತೆರಳಿದ್ದಾಗ್ಯೂ ಅಧಿಕಾರಿ/ ಸಿಬ್ಬಂದಿಗಳ ಜೇಷ್ಠತೆಯಲ್ಲಿ ಯಾವುದೇ ವ್ಯತ್ಯಯವಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಪ್ರತ್ಯೇಕ ಕ್ರಮವಿರುವುದಿಲ್ಲ.

ಸಂಖ್ಯೆ: ಸಿಆಸುಇ 105 ರಾಸಾ 2020

(ಸಹಿ)
ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿಗಳು